# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 645
ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 12-07-2023

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಸರ್ಕಾರಿ ಬಸ್ ಸೌಲಭ್ಯ ವಂಚಿತ ಗ್ರಾಮಗಳೆಷ್ಟು;</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಸ್ ಸೌಲಭ್ಯವಿಲ್ಲದ ಗ್ರಾಮಗಳ ನಿಗಮವಾರು ಮಾಹಿತಿ ಈ ಕೆಳಕಂಡಂತಿದೆ:-<br>
<table>
<tr><th>ನಿಗಮ</th><th>ಬಸ್ ಸೌಲಭ್ಯವಿಲ್ಲದ ಗ್ರಾಮಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>204 ಗ್ರಾಮಗಳಿಗೆ ಭಾರಿ ವಾಹನ ಚಲಿಸುವ ರಸ್ತೆ ಇರುವುದಿಲ್ಲ.</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>--</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>45 ಗ್ರಾಮಗಳಿಗೆ ಭಾರಿ ವಾಹನ ಚಲಿಸುವ ರಸ್ತೆ ಇರುವುದಿಲ್ಲ.</td></tr>
<tr><td>ಕ.ಕ.ರ.ಸಾ.ನಿಗಮ</td><td>42 ಗ್ರಾಮಗಳಿಗೆ ಭಾರಿ ವಾಹನ ಚಲಿಸುವ ರಸ್ತೆ ಇರುವುದಿಲ್ಲ.</td></tr>
</table>
ರಸ್ತೆ ಸೌಲಭ್ಯವಿರುವ ಗ್ರಾಮಗಳ ಸಮೀಪದವರೆಗೆ ನಿಗಮಗಳ ಹಾಗೂ ಖಾಸಗಿ ಸಾರಿಗೆ ಬಸ್ಸುಗಳ ಸೌಲಭ್ಯವಿರುತ್ತದೆ.</td></tr>
<tr><td>ಆ.</td><td>ಈ ಗ್ರಾಮಗಳಿಗೆ ಬಸ್ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>2023-24ನೇ ಸಾಲಿನ ಕ್ರಿಯಾ ಯೋಜನೆಯಂತೆ ಹಾಗೂ ಶಕ್ತಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊಸ ವಾಹನಗಳನ್ನು ಸೇರಿಸುವ ಹಾಗೂ ಚಾಲನಾ ಸಿಬ್ಬಂದಿಗಳ ನೇರ ನೇಮಕಾತಿ ಮಾಡಿಕೊಳ್ಳುವುದು ಅವಶ್ಯಕತೆಯಿದ್ದು, ಈ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ.<br><br>ಮುಂದುವರೆದು, ಸಾರಿಗೆ ಸೌಲಭ್ಯವಿಲ್ಲದ ಗ್ರಾಮಗಳಿಗೆ ಬೇಡಿಕೆಗೆ ಅನುಗುಣವಾಗಿ ಸದರಿ ಗ್ರಾಮಗಳಿಗೆ ಹಂತಹಂತವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೋಢಿಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ.</td><td>ರಾಜ್ಯ ಸರ್ಕಾರ ಮಹಿಳೆಯರಿಗಾಗಿ ರೂಪಿಸಿರುವ ಜನಪ್ರಿಯ "ಶಕ್ತಿ ಯೋಜನೆ"ಯ ಸೌಲಭ್ಯವನ್ನು ಈ ಗ್ರಾಮಗಳ ಮಹಿಳೆಯರಿಗೂ ಕಲ್ಪಿಸಿಕೊಡಲು ಸರ್ಕಾರ ರೂಪಿಸಿರುವ ಕಾರ್ಯ ಯೋಜನೆಗಳೇನು?</td><td>ವಾಹನ ಸಂಚಾರಕ್ಕೆ ಯೋಗ್ಯ ರಸ್ತೆ ಇರುವ ಹತ್ತಿರದ ಗ್ರಾಮ/ ಮುಖ್ಯ ರಸ್ತೆಗಳವರೆಗೆ ಇರುವ ಸಾರಿಗೆ ಸೌಲಭ್ಯಗಳನ್ನು ಪ್ರಸ್ತುತ ಶಕ್ತಿ ಯೋಜನೆಯಡಿ ಬಳಸಿಕೊಳ್ಳಬಹುದಾಗಿದೆ.</td></tr>
</table>

ಸಂಖ್ಯೆ: ಟಿಡಿ 109 ಟಿಸಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು